2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು
ಸತ್ರ ಮೊಕದ್ದಮೆ ನಂಃ 29/2023

| | | |
|---|---|---|
| ಸಾಕ್ಷಿದಾರರ ಹೆಸರು | - ರಮೇಶ್ ಹೆಚ್ ಪಿ | ಪಿಡಬ್ಲೂ - 11 |
| ತಂದೆಯ ಹೆಸರು | - ಪುಟ್ಟೇಗೌಡ | ಸಿಡಬ್ಲೂ -21 |
| ವಯಸ್ಸು | - 59 ವರ್ಷ | |
| ಉದ್ಯೋಗ | - ಪಿ ಡಿ ಒ ಅತ್ತಿಕುಡಿಗೆ ಗ್ರಾಮ ಪಂಚಾಯ್ತಿ. | |
| ವಾಸ ಸ್ಥಳ | - ಹೇರೂರು | |

ದಿನಾಂಕಃ 10-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ

1. ನಾನು 2015 ನೇ ಇಸವಿಯಿಂದ ಇಲ್ಲಿಯವರೆಗೆ ಅತ್ತಿಕುಡಿಗೆ ಗ್ರಾಮ ಪಂಚಾಯ್ತಿಯಲ್ಲಿ ಪಿ ಡಿ ಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 18.11.2022 ರಂದು ಕೊಪ್ಪ ವೃತ್ತ ನಿರೀಕ್ಷಕರು ನನಗೆ ಮನವಿಯನ್ನು ಸಲ್ಲಿಸಿ ಜಯಪುರ ಠಾಣಾ ಮೊಕದ್ದಮೆ ಸಂಖ್ಯೆ 50/2022 ಕ್ಕೆ ಸಂಬಂಧಿಸಿದಂತೆ ಹೊನ್ನಗುಂಡಿ ಗ್ರಾಮದಲ್ಲಿ ಸದಾನಂದ ಬಿನ್ ಲೇಟ್ ಗುರುವ ರವರು ವಾಸವಾಗಿರುವ ಮನೆಯ ಅಸೆಸ್ ಮೆಂಟ್ ಪ್ರತಿಯನ್ನು ನೀಡುವಂತೆ ಕೋರಿದ್ದರು. ಸದರಿ ಮನವಿಯನ್ನು ನಾನು ದಿನಾಂಕ 22.11.2022 ರಂದು ಸ್ವೀಕರಿಸಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.32 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.32(ಬಿ) ಎಂದು ಗುರುತಿಸಲಾಯಿತು.

3. ಅದರ ಮೇರೆಗೆ ನಾನು ನಮ್ಮ ಪಂಚಾಯ್ತಿಯ ಕಡತಗಳನ್ನು ಪರಿಶೀಲಿಸಿ ನೋಡಿದಾಗ ಸದಾನಂದ ಬಿನ್ ಲೇಟ್ ಗುರುವ ರವರು ಹೊನ್ನಗುಂಡಿ ಗ್ರಾಮದಲ್ಲಿ ವಾಸವಿದ್ದ ಮನೆಯ ಅಸೆಸ್ ಮೆಂಟ್ ಸಂಖ್ಯೆ 206/240 ಆಗಿದ್ದು ಅದು ಗೋಪಾಲ ಬಿನ್ ಕುಪ್ಪ ಪೂಜಾರಿ ಎಂಬುವವರ ಹೆಸರಿನಲ್ಲಿ ದಾಖಲಾಗಿದ್ದು ಕಂಡು ಬಂತು. ಸದಾನಂದ ಬಿನ್ ಲೇಟ್ ಗುರುವ ರವರ ಹೆಸರಿನಲ್ಲಿ ಖಾತೆ ಇಲ್ಲದಿರುವುದುಕಂಡು ಬಂತು.

4. ಆ ಬಗ್ಗೆ ನಾನು ದಿನಾಂಕ 10.01.2023 ರಂದು ಕೊಪ್ಪ ವೃತ್ತ ನಿರೀಕ್ಷಕರಿಗೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಸಂಬಂಧಿಸಿದ ಪೊಲೀಸರು ದಿನಾಂಕ 16.01.2023 ರಂದು ನನ್ನಿಂದ ಪಡೆದುಕೊಂಡಿರುತ್ತಾರೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.42 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.42(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ

5. ಪ್ರತಿ ಸ್ವತ್ತಿನ ಇ ಖಾತೆಯನ್ನು ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಬೇಕೆಂಬ ಅಧಿಸೂಚನೆ ಇದೆ ಎಂದರೆ ಸರಿ. ಯಾವುದೇ ಮನೆಗೆ ವಿದ್ಯುತ್ ಸಂಪರ್ಕವನ್ನು ಪಡೆಯಲು ಪಂಚಾಯ್ತಿಯಿಂದ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಪೊಲೀಸರು ಕೇಳಿದ್ದಾರೆ ಎಂದು ಹೇಳಲಾದ ಸ್ವತ್ತಿಗೆ ಸಂಬಂಧಿಸಿದ ಅಸೆಸ್

ಮೆಂಟ್ ಪ್ರತಿ ಅಥವಾ ಯಾವುದಾದರೂ ದಾಖಲೆಯನ್ನು ನಿಪಿ.42 ಪತ್ರದೊಂದಿಗೆ ಪೊಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಹೊನ್ನಗುಂಡಿ ಗ್ರಾಮದಲ್ಲಿರುವ ಅಸೆಸ್ ಮೆಂಟ್ ಸಂಖ್ಯೆ 206/240 ಗೋಪಾಲ ಬಿನ್ ಕುಪ್ಪ ಪೂಜಾರಿ ಎಂಬುವವರ ಹೆಸರಿನಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ.

6. ಸದರಿ ದಾಖಲೆಯನ್ನು ನೀವು ಪೊಲೀಸರ ಕೋರಿಕೆಯ ಮೇರೆಗೆ ಸೃಷ್ಟಿಸಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದಾನಂದ ಬಿನ್ ಲೇಟ್ ಗುರುವ ಎಂಬ ವ್ಯಕ್ತಿ ಹೊನ್ನಗುಂಡಿ ಗ್ರಾಮದಲ್ಲಿರುವ ಅಸೆಸ್ ಮೆಂಟ್ ಸಂಖ್ಯೆ 206/240 ಮನೆಯಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯನ್ನು ಸ್ವೀಕರಿಸಿದ ಬಳಿಕ ನೀವು ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಬಗ್ಗೆ ಪಂಚನಾಮೆಯನ್ನು ಜರುಗಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ.42 ರಂತೆ ಸುಳ್ಳು ದಾಖಲೆಯನ್ನು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ